ಕರ್ನಾಟಕ ಸರ್ಕಾರ-ಜಿಲ್ಲಾ ಪಂಚಾಯತ್-ಶಾಲಾ ಶಿಕ್ಷಣ ಇಲಾಖೆ
ಸಮಗ್ರ ಶಿಕ್ಷಣ ಕರ್ನಾಟಕ - ಶಿವಮೊಗ್ಗ ಜಿಲ್ಲೆ

ಸಂಖ್ಯೆ :ಎಸ್.ಎಸ್.ಕೆ./ಎ1/ಪಿ.ಎಂ.ಶ್ರೀ ಶಾಲೆ/23/2025-26 ದಿನಾಂಕ: 17-03-2026

## ಅಧಿಕೃತ ಜ್ಞಾಪನಾ

ವಿಷಯ :2025-26 ನೇ ಸಾಲಿನ ಪಿಎಬಿ ಅನುಮೋದಿತ ಪಿ.ಎಂ.ಶ್ರೀ ಶಾಲೆಗಳ ಸಿವಿಲ್ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವಬಗ್ಗೆ.

ಉಲ್ಲೇಖ :1. ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಶಿಕ/ಪಿ.ಎಂ.ಶ್ರೀ/ಅ.ಬಿ/2024-25. ದಿನಾಂಕ : 28/10/2025.

2. ಮಾನ್ಯ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅನುಮೋದನೆ ದಿನಾಂಕ : 04/12/2025.
3. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ : 10-12-2025.
4. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ ಇವರ ಪತ್ರ ಸಂಖ್ಯೆ : ಕಾ.ಇಂ/ಪಂ.ರಾ.ಇಂ/ವಿ.ಶಿ/ಕಿ.ಇಂ-1/2025-26/2606. ದಿನಾಂಕ : 13/03/2026, 19/02/2026 & 03/02/2026

==00==

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2025-26 ನೇ ಸಾಲಿನ ಪಿಎಬಿ ಅನುಮೋದಿತ ಪಿ.ಎಂ.ಶ್ರೀ ಶಾಲೆಗಳ ಸಿವಿಲ್ ಕಾಮಗಾರಿಗಳ ಈ ಕೆಳಕಂಡ ಕೋಷ್ಟಕದಲ್ಲಿರುವ ಶಾಲೆಗಳಿಗೆ ಉಲ್ಲೇಖ(1) ರಲ್ಲಿ ಬಿಡುಗಡೆಯಾದ ಚಟುವಟಿಕೆಗಳಾದ ಕೊಠಡಿಗಳ ದುರಸ್ಥಿ ಕಾಮಗಾರಿ ಹಾಗೂ ಆಟದ ಮೈದಾನದ ಅಭಿವೃದ್ಧಿಗೆ. ಉಲ್ಲೇಖ-2 ರಲ್ಲಿ ಮಾನ್ಯ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗರವರು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ,ಶಿವಮೊಗ್ಗ ವಿಭಾಗ ಇವರನ್ನು ಅನುಷ್ಠಾನ ಏಜೆನ್ಸಿಯಾಗಿ ನೇಮಿಸಿರುತ್ತಾರೆ.

ಉಲ್ಲೇಖ (4) ರಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ ಶಿವಮೊಗ್ಗ ವಿಭಾಗ,ಶಿವಮೊಗ್ಗ ಇವರು ಕಾಮಗಾರಿಯ ಅಂದಾಜು ಪಟ್ಟಿ ಮತ್ತು ನೀಲಿನಕ್ಷೆ ತಯಾರಿಸಿ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

| ಕ್ರ. ಸಂ | ತಾಲ್ಲೂಕಿನ ಹೆಸರು | ಶಾಲೆಯ ಹೆಸರು | ಮಂಜೂರಾದ ಕಾಮಗಾರಿ ವಿವರ | ಅನುದಾನ ರೂ. ಲಕ್ಷಗಳಲ್ಲಿ | ಷರಾ |
|---|---|---|---|---|---|
| 1 | ಭದ್ರಾವತಿ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈದೊಳಲು | ಆಟದ ಮೈದಾನದ ಅಭಿವೃದಿ | 5.00 | |
| 2 | ಶಿವಮೊಗ್ಗ | ಕರ್ನಾಟಕ ಪಬ್ಲಿಕ್ ಶಾಲೆ ಕೆಆರ್‌ಪುರಂ | ಆಟದ ಮೈದಾನದ ಅಭಿವೃದಿ | 5.00 | |
| 3 | ಶಿವಮೊಗ್ಗ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಕೊಪ್ಪ | ಆಟದ ಮೈದಾನದ ಅಭಿವೃದಿ | 5.00 | |
| 4 | ತೀರ್ಥಹಳ್ಳಿ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರೇಗದ್ದೆ | ಆಟದ ಮೈದಾನದ ಅಭಿವೃದಿ | 5.00 | |
| 5 | ತೀರ್ಥಹಳ್ಳಿ | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿರೇಗದ್ದೆ | ಕೊಠಡಿ ದುರಸ್ಥಿ ಕಾಮಗಾರಿ | 3.00 | |
| | | | ಒಟ್ಟು | 23.00 | |

ಈ ಬಗ್ಗೆ ಪರಿಶೀಲಿಸಲಾಗಿ, ಉಲ್ಲೇಖ(1) ರ ರಾಜ್ಯ ಕಛೇರಿಯ ಆದೇಶದನ್ವಯ ಮತ್ತು ಉಲ್ಲೇಖ(2) ರಲ್ಲಿ ಮಾನ್ಯ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಆದೇಶದಂತೆ ಉಲ್ಲೇಖ(4) ರ ಅಂದಾಜು ಪಟ್ಟಿಗಳಿಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು :-

1. ಅನುಮೋದಿತ ಕ್ರಿಯಾ ಯೋಜನೆಯ ಕಾಮಗಾರಿಗಳಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ ಮಾಡಿಕೊಂಡಲ್ಲಿ ಅನುಷ್ಠಾನ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.
2. ಕಾಮಗಾರಿಗಳ ಉಲ್ಲೇಖ 1 ರಲ್ಲಿನ ಷರತ್ತುಗಳ ರನ್ವಯ ರಾಜ್ಯ ಕಛೇರಿಯಿಂದ ನೀಡಿದ ಷರತ್ತುಗನಂತೆ ಕಾಮಗಾರಿಯನ್ನು ನಿರ್ವಹಿಸುವುದು.
3. ಕಾಮಗಾರಿಯನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸತಕ್ಕದ್ದು.
4. ಅನುದಾನವು ಯಾವ ಉದ್ದೇಶಕ್ಕಾಗಿ ಬಿಡುಗಡೆಯಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಕೆ ಮಾಡುವುದು.
5. ಶಾಲಾ ಕೊಠಡಿಯ ದುರಸ್ಥಿ ಹಾಗೂ ಆಟದ ಮೈದಾನ ಅಭಿವೃದ್ಧಿ ಕಾಮಗಾರಿಯ ಪ್ರತೀ ಹಂತದಲ್ಲಿ ಪ್ಲಾನ್ ಮತ್ತು ಎಸ್ಟಿಮೇಟ್‌ನಂತೆ ಉತ್ತಮ ಗುಣಮಟ್ಟದಲ್ಲಿ ನಿರ್ವಹಣೆ ಮಾಡುವುದು.
6. ನಿಗಧಿ ಪಡಿಸಿರುವ ಹಣದ ಮಿತಿಯಲ್ಲಿಯೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಹಾಗೂ ಯಾವುದೇ ಕಾರಣಕ್ಕೂ ನಿಗಧಿ ಪಡಿಸಿರುವ ಹಣಕ್ಕಿಂತ ಹೆಚ್ಚು ವೆಚ್ಚ ಭರಿಸಬಾರದೆಂದು ತಿಳಿಸಿದೆ.
7. ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸಿ ದ್ವಿಪ್ರತಿಯಲ್ಲಿ ನಿಗಧಿಪಡಿಸಿದ ಪಟ್ಟಿ ಪ್ರಕಾರ ಉತ್ತಮ ಗುಣಮಟ್ಟದಲ್ಲಿ ಕಾಮಗಾರಿ ನಿರ್ವಹಿಸಿದ ಬಗ್ಗೆ ಮುಕ್ತಾಯ ದೃಢೀಕರಣ ಪತ್ರ, ಛಾಯಾಪ್ರತಿಗಳೊಂದಿಗೆ ಉಪಯೋಗಿತಾ ಪ್ರಮಾಣ ಪತ್ರಗಳನ್ನು ನಿಗಧಿತ ನಮೂನೆಯಲ್ಲಿ ಈ ಕಛೇರಿಗೆ ಸಲ್ಲಿಸತಕ್ಕದ್ದು.
8. ಸದರಿ ಕಾಮಗಾರಿಯ ಅನುಮೋದಿತ ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ಕಾಮಗಾರಿ ನಡೆಯುವಂತಹ ಶಾಲಾಮುಖ್ಯಶಿಕ್ಷಕರಿಗೆ ಒಂದು ಪ್ರತಿಯನ್ನು ನೀಡುವುದು.
9. ಸದರಿ ಕಾಮಗಾರಿಯ ಗುಣಮಟ್ಟದ ಕುರಿತು ಸಾರ್ವಜನಿಕರು/ ಜನಪ್ರತಿನಿಧಿಗಳಿಂದ ಯಾವುದೇ ರೀತಿಯ ದೂರುಕೊರತೆಗಳು ಬಾರದಂತೆ ಕ್ರಮವಹಿಸುವುದು.
10. ಕಾಮಗಾರಿಯ ಆರ್.ಎ. ಬಿಲ್ಲು ಹಾಗೂ ಅಂತಿಮ ಬಿಲ್ಲುಗಳನ್ನು ನೀಡುವ ಮುಂಚೆ ಚೆಕ್‌ಲಿಸ್ಟ್‌ನ್ನು ಸಂಬಂಧಪಟ್ಟ ಎಸ್.ಎಸ್.ಕೆ. ಅಭಿಯಂತರರು ಹಾಗೂ ರಾಜ್ಯ ಯೋಜನಾ ಅಭಿಯಂತರರ ಮೇಲುಸಹಿ ಪಡೆದು ರಾಜ್ಯ ಯೋಜನಾ ನಿರ್ದೇಶಕರು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ರವರ ಗಮನಕ್ಕೆ ತಂದ ನಂತರವೇ ಪಾವತಿಸುವುದು.

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ, ಶಿವಮೊಗ್ಗ

ಗೆ,

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ.

ಪ್ರತಿಯನ್ನು,

1)ಕ್ಷೇತ್ರಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ, ಶಿವಮೊಗ್ಗ, ಭದ್ರಾವತಿ ಮತ್ತು ತೀರ್ಥಹಳ್ಳಿ ತಾಲ್ಲೂಕು.

2) ಸಂಬಂಧಿಸಿದ ಪಿಎಂಶ್ರೀ ಶಾಲೆಯ ಮುಖ್ಯಶಿಕ್ಷಕರುಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ ಮಾಹಿತಿಗಾಗಿ